# ದಲ್ಜಿತ್ ವಿರೋಧಾಭಾಸ

ದಲ್ಜಿತ್ ದೊಸಾಂಝ್ ಪಂಜಾಬಿ ಗಾಯಕ. ಇಷ್ಟು ಹೇಳಿದರೆ ಅವರ ಜನಪ್ರಿಯತೆಯನ್ನು ಅಭಿವ್ಯಕ್ತಿಸಿದಂತೆ ಆಗುವುದಿಲ್ಲ. ಅವರು ಇತ್ತೀಚೆಗೆ ಬೆಂಗಳೂರಿನಲ್ಲಿ ಒಂದು ಕಾರ್ಯಕ್ರಮ ಕೊಟ್ಟರು. ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದ ಬಯಲಿನಲ್ಲಿ ಹದಿನೈದು ದಿನ ಸಿದ್ಧಪಡಿಸಿದ ವೇದಿಕೆ ಮೇಲೆ ಅವರು ನಿಂತಿದ್ದರು. ಎದುರಲ್ಲಿ ನೆರೆದಿದ್ದ ಪ್ರೇಕ್ಷಕರು ಟಿಕೆಟ್‌ಗೆ 17 ಸಾವಿರ ರೂಪಾಯಿಯಿಂದ ಒಂದು ಲಕ್ಷ ರೂಪಾಯಿ ತೆತ್ತು ಬಂದಿದ್ದರು. ದೀಪಿಕಾ ಪಡುಕೋಣೆ ಕೂಡ ಆ ದಿನ ದಲ್ಜಿತ್ ಸಂಗೀತ ಕೇಳಲು ಬಂದದ್ದು ಜನರಿಗೆ ಅಚ್ಚರಿ. ರಾಮೇಶ್ವರಂ ಕೆಫೆಯಲ್ಲಿ ದಲ್ಜಿತ್ ತಿಂಡಿ ತಿನ್ನಲು ಹೋಗಿದ್ದರಂತೆ ಎನ್ನುವುದು ಆ ದಿನಮಾನದ ಪ್ರಮುಖ ಸುದ್ದಿಗಳಲ್ಲಿ ಒಂದು.

ಈಗ ಅವರ ಜನಪ್ರಿಯತೆಯ ರುಚಿ ಗೊತ್ತಾಗಿರಲಿಕ್ಕೆ ಸಾಕು.

'ದಿಲ್ ಲ್ಯೂಮಿನಾಟಿ ಇಂಡಿಯಾ–2024' ಹೆಸರಿನ ಕಛೇರಿಗಳ ಅಭಿಯಾನವೊಂದನ್ನು ಅವರು ಅಕ್ಟೋಬರ್‌ನಿಂದ ನಡೆಸುತ್ತಾ ಬಂದಿದ್ದಾರೆ. ಅದರ ಭಾಗವಾಗಿಯೇ ಅವರು ಬೆಂಗಳೂರಿಗೆ ಬಂದಿದ್ದರು. ಭಾರತದ ವಿವಿಧ ನಗರಗಳಲ್ಲಿ ಅವರ ಸಂಗೀತ ಕಛೇರಿಗಳು ಆಯೋಜಿತವಾಗಿವೆ. ಆದರೆ, ಮೊನ್ನೆ ಪಂಜಾಬ್‌ನಲ್ಲಿ ಅವರು ಒಂದು ಹೇಳಿಕೆ ಕೊಟ್ಟರು. ಎಲ್ಲಿಯವರೆಗೆ ಕಛೇರಿ ನಡೆಸಲು ಬೇಕಾದ ಸಮರ್ಪಕ ಮೂಲಸೌಕರ್ಯ ನಮ್ಮಲ್ಲಿ ದೊರೆಯುವುದಿಲ್ಲವೋ ಅಲ್ಲಿಯವರೆಗೆ ಭಾರತದಲ್ಲಿ ಕಾರ್ಯಕ್ರಮ ನೀಡುವುದಿಲ್ಲ ಎನ್ನುವ ಹೇಳಿಕೆ ಅದು.

'ದೇಸಿ ದಾರು', 'ಪಟಿಯಾಲಾ ಪೆಗ್' ಎನ್ನುವ ಗೀತೆಗಳು ಅವರ ಜನಪ್ರಿಯ ಹಾಡುಗಳ ಪಟ್ಟಿಯಲ್ಲಿ ಇವೆ. ಅವನ್ನು ಹಾಡಕೂಡದು ಎಂದು ಕೆಲವೆಡೆ ರಾಜ್ಯ ಸರ್ಕಾರಗಳೇ ಅವರಿಗೆ ನೋಟಿಸ್ ಕಳುಹಿಸಿರುವ ಉದಾಹರಣೆಗಳಿವೆ. ಅಲಹಾಬಾದ್ ಕಾರ್ಯಕ್ರಮದಲ್ಲಿ ಅವರು ಅಂತಹ ಯಾವುದೇ ಹಾಡನ್ನು ಹಾಡಲಿಲ್ಲ. 'ಅದು ಡ್ರೈ ಸಿಟಿ ಅಲ್ಲವೇ?' ಎಂದು ಚಟಾಕಿ ಹಾರಿಸಿದ್ದರು. ಮದ್ಯದ ಅಂಗಡಿಗಳನ್ನೆಲ್ಲ ಪೂರ್ತಿ ಮುಚ್ಚಿಸಿಬಿಟ್ಟರೆ ಅಂತಹ ಹಾಡುಗಳನ್ನು ಹಾಡುವ ಪ್ರಮೇಯವೇ ಇರುವುದಿಲ್ಲ ಎಂದೂ ಅವರು ಆಗೀಗ ಹೇಳುತ್ತಿರುತ್ತಾರೆ.

ಕೆನಡಿಯನ್ ಮ್ಯೂಸಿಕಲ್ ಚಾರ್ಟ್, ಯುಕೆ ಏಷ್ಯಾ ಮ್ಯೂಸಿಕಲ್ ಚಾರ್ಟ್‌ಗಳಲ್ಲಿ ಅನೇಕ ಸಲ ಕಾಣಿಸಿಕೊಂಡ ದೊಡ್ಡ ಹೆಸರು ಅವರು. ಪಂಜಾಬಿ ಹಾಗೂ ಹಿಂದಿ ಸಿನಿಮಾಗಳಲ್ಲಿ ಸಂಗೀತದ ಮಟ್ಟಿಗೆ ತೊಡಗಿಸಿಕೊಂಡಿದ್ದು ಅಷ್ಟೇ ಅಲ್ಲದೆ ಅಭಿನಯ ಛಾಪನ್ನೂ ಮೂಡಿಸಿರುವ ಇವರು ಯುವಜನತೆಯ ಪಾಲಿಗೆ ಸೂಜಿಗಲ್ಲು.





# ಸಿಕಂದರ್ ಸಲ್ಮಾನ್‌ಗೆ ದಕ್ಷಿಣ ಪ್ರತಿಭೆಗಳ ರಥ

ಸಲ್ಮಾನ್ ಖಾನ್ ತಮಗೆ ಬ್ರೇಕ್ ಅಗತ್ಯವಿದ್ದಾಗಲೆಲ್ಲ ದಕ್ಷಿಣ ಭಾರತದ ಸೃಜನಶೀಲ ಮನಸ್ಸುಗಳನ್ನು ನೆಚ್ಚಿಕೊಳ್ಳುತ್ತಾ ಬಂದವರು. ಸಾಲು ಸಾಲು ಸಿನಿಮಾಗಳು ಮಕಾಡೆಯಾಗುತ್ತಿದ್ದಾಗ ಪ್ರಭುದೇವ ಅವರನ್ನು ಕರೆಸಿ, 'ವಾಂಟೆಡ್' ಸಿನಿಮಾ ಮಾಡಿ ಗೆಲುವನ್ನು ಮತ್ತೆ ತಮ್ಮತ್ತ ಸೆಳೆದುಕೊಂಡವರು. 'ಭಜರಂಗಿ ಭಾಯಿ ಜಾನ್' ಸಿನಿಮಾದಲ್ಲಿ ಹನುಮ ಭಕ್ತನಾಗಿ ಜನಿವಾರ ಹಾಕಿಕೊಂಡು ನಿಂತವರೂ ಅವರೇ. ದೇಶದ ಭಕ್ತರೆಲ್ಲ ಒಂದು ದಿಕ್ಕಿನಲ್ಲಿ ಯೋಚಿಸುತ್ತಿರುವಾಗ, ಆ ಮಾರುಕಟ್ಟೆಯನ್ನೂ ದುಡಿಸಿಕೊಳ್ಳಬಲ್ಲ ನಟ ತಾವು ಎಂದು ಸಾಬೀತುಪಡಿಸಿದ ಚಿತ್ರ ಅದು.

ಕಳೆದ ಕೆಲವು ವರ್ಷಗಳಿಂದ ಅವರಿಗೆ ನಿರೀಕ್ಷಿತ ಯಶಸ್ಸು ಸಿಗುತ್ತಿಲ್ಲ. 'ಸುಲ್ತಾನ್' ದೊಡ್ಡ ಮಟ್ಟದ ಯಶಸ್ಸನ್ನು ಅವರಿಗೆ ಕೊಟ್ಟಿತ್ತು. 'ಏಕ್ ಥಾ ಟೈಗರ್'ನ ಯಶಸ್ಸಿನ ಅಲೆಯನ್ನೇ ನೆಚ್ಚಿಕೊಂಡು ಅದರ ಸರಣಿಗೂ ಕೈಹಾಕಿದರಾದರೂ ಅದು ನಿರೀಕ್ಷಿತ ಫಲ ನೀಡಲಿಲ್ಲ. ಅವರು ಮುಂದಿನ ಈದ್‌ನಲ್ಲಿ 'ಸಿಕಂದರ್' ಸಿನಿಮಾವನ್ನು ಪ್ರೇಕ್ಷಕರಿಗೆ ನೀಡುತ್ತಿದ್ದಾರೆ. ಈ ಸಿನಿಮಾ ನಿರ್ದೇಶಕ ಎ.ಆರ್. ಮುರುಗದಾಸ್.

ಶಾಲೆಯಲ್ಲಿ ಕಲಿಯುತ್ತಿದ್ದಾಗ ಶಿಕ್ಷಕರು, ದೊಡ್ಡವನಾದ ಮೇಲೆ ಏನಾಗುವೆ ಎಂದು ಪ್ರಶ್ನಿಸಿದಾಗ, 'ಸಿನಿಮಾ ನಿರ್ದೇಶಕ ಆಗುವೆ' ಎಂದು ಎರಡನೇ ಯೋಚನೆಯೇ ಇಲ್ಲದಂತೆ ಹೇಳಿದ್ದವರು ಮುರುಗದಾಸ್. 'ಗಜನಿ' ಸಿನಿಮಾ ಸಾಕಾರಗೊಳ್ಳಲು ಅವರು ಪಟ್ಟ ಪಡಿಪಾಟಲನ್ನೇ ಇಟ್ಟುಕೊಂಡು ಒಂದು ಸಿನಿಮಾ ಮಾಡಬಹುದು. ಆಮೇಲೆ, ಆ ಚಿತ್ರ ತಮಿಳಿನಲ್ಲಷ್ಟೇ ಅಲ್ಲದೆ ಹಿಂದಿ ರೀಮೇಕ್‌ನಲ್ಲೂ ಭಾರಿ ಯಶಸ್ಸು ಕಂಡಿತು.

ಮುರುಗದಾಸ್ ಈಗ ನಿರ್ದೇಶಕ ಅಷ್ಟೇ ಅಲ್ಲ, ನಿರ್ಮಾಪಕರಾಗಿಯೂ ಬೆಳೆದವರು. ಅವರ ಸಂವೇದನೆಯನ್ನು ಸಲ್ಮಾನ್ ಖಾನ್ ನೆಚ್ಚಿಕೊಂಡಿದ್ದರಲ್ಲಿ ಅಚ್ಚರಿಯೇನೂ ಇಲ್ಲ.

ಇತ್ತೀಚೆಗೆ 'ಸಿಕಂದರ್' ಚಿತ್ರದ ಟ್ರೇಲರ್ ಬಿಡುಗಡೆಯಾಯಿತು. ಕನ್ನಡದ ನಟಿ ರಶ್ಮಿಕಾ ಮಂದಣ್ಣ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಪಂಜಾಬ್ ಮೂಲದವರಾದರೂ ದಕ್ಷಿಣ ಭಾರತದ ಚಿತ್ರಗಳಲ್ಲೇ ನೆಲೆ ಕಂಡುಕೊಂಡಿರುವ ಕಾಜಲ್ ಅಗರ್ವಾಲ್ ಕೂಡ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಸಂತೋಷ್ ನಾರಾಯಣನ್ ಈ ಚಿತ್ರಕ್ಕೆ ಹಿನ್ನೆಲೆ ಸಂಗೀತ ನೀಡಿದ್ದು, ಅವರೂ ದಕ್ಷಿಣ ಭಾರತದ ಪ್ರತಿಭೆ. ಕಟ್ಟಪ್ಪನ ಪಾತ್ರದಲ್ಲಿ 'ಬಾಹುಬಲಿ' ಸಿನಿಮಾ ಮೂಲಕ ಅಚ್ಚೊತ್ತಿದ ಸತ್ಯರಾಜ್ ಈ ಚಿತ್ರದಲ್ಲಿ ಕೂಡ ಗಮನಸೆಳೆಯುವ ಪಾತ್ರವೊಂದರಲ್ಲಿ ಅಭಿನಯಿಸಿದ್ದಾರೆ.

ಇವೆಲ್ಲವನ್ನೂ ಗಮನಿಸಿದರೆ, ದಕ್ಷಿಣ ಭಾರತದ ಚಿತ್ರಪ್ರತಿಭೆಗಳನ್ನು ಸಲ್ಮಾನ್ ಯಾವ ಮಟ್ಟದಲ್ಲಿ ನೆಚ್ಚಿಕೊಂಡಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ.

ಸಲ್ಮಾನ್ ಖಾನ್ ಮುಂದಿನ ಚಿತ್ರವನ್ನು ದಕ್ಷಿಣ ಭಾರತದ ಅಟ್ಲಿ ನಿರ್ದೇಶಿಸುವ ಸುದ್ದಿಯೂ ಅದಾಗಲೇ ಹರಿದಾಡುತ್ತಿದೆ. ಈ ಅಟ್ಲಿ ನಿರ್ದೇಶಿಸಿದ ಮೊದಲ ತಮಿಳು ಚಿತ್ರ 'ರಾಜಾ ರಾಣಿ' ನಿರ್ಮಿಸಿದ್ದವರು ಇದೇ ಮುರುಗದಾಸ್. ಗುರುವಿನ ಚಿತ್ರದ ನಂತರ ಶಿಷ್ಯನ ಸಿನಿಮಾ ನಿಕಷಕ್ಕೆ ಸಲ್ಮಾನ್ ಒಡ್ಡಿಕೊಳ್ಳಲಿದ್ದಾರೆ ಎಂದಾಯಿತು.